ಸಿ.ಸಿ. ನಂಬ್ರ: 2058/2026 PW-1

ದಿನಾಂಕ: 25.07.2026

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆ : ಪಿರ್ಯಾದುದಾರ ಪರ ವಕೀಲರಿಂದ :**

**ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ನಮೂದಿಸಿರುವ ಎಲ್ಲಾ ಸಂಗತಿಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿದ್ದು, ನಾನು ಅದಕ್ಕೆ ನನ್ನ ಸಹಿ ಮಾಡಿರುತ್ತೇನೆ.**

ದಿನಾಂಕ 02-07-2025 ರ ಚೆಕ್ ಅನ್ನು ಹಾಜರು ಪಡಿಸಿದ್ದು ನಿಪಿ-01 ಎಂದು ಗುರುತಿಸಲಾಯಿತು. ಚೆಕ್ಕಿನಲ್ಲಿರುವ ಆರೋಪಿಯ ಸಹಿಯನ್ನು ನಿಪಿ-01(ಎ) ಎಂದು ಗುರುತಿಸಲಾಯಿತು. ಬ್ಯಾಂಕ್ ಮೆಮೋ ಹಾಜರು ಪಡಿಸಿದ್ದು ನಿಪಿ-02 ಎಂದು ಗುರುತಿಸಲಾಯಿತು. ದಿನಾಂಕ 31.07.2025 ರಂದು ಆರೋಪಿಗೆ ನೀಡಿದ ಕಾನೂನು ತಿಳುವಳಿಕೆಯನ್ನು ಹಾಜರು ಪಡಿಸಿದ್ದು ನಿಪಿ-03 ಎಂದು ಗುರುತಿಸಲಾಯಿತು. ಅಂಚೆ ರಸೀದಿಗಳನ್ನು ಹಾಜರು ಪಡಿಸಿದ್ದು ನಿಪಿ-04 ಮತ್ತು ನಿಪಿ-05 ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿಗಳನ್ನು ಹಾಜರು ಪಡಿಸಿದ್ದು ನಿಪಿ-06 ಮತ್ತು ನಿಪಿ-07 ಎಂದು ಗುರುತಿಸಲಾಯಿತು. ದಿ: 18-08-2025ರಂದು ಆರೋಪಿಗೆ ಸದ್ರಿ ಕಾನೂನು ತಿಳುವಳಿಕೆಗೆ ನೀಡಿದ ಮರು ಉತ್ತರವನ್ನು ಹಾಜರುಪಡಿಸಿದ್ದು ನಿಪಿ-08 ಎಂದು ಗುರುತಿಸಲಾಯಿತು.

**ಪಿರ್ಯಾದು ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲವಕಾಶ ಕೋರಿದ್ದು ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**(ಶ್ರೀನಿವಾಸ ಕೆ.ಆರ್)**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ. ದ. ನ್ಯಾ. ದಂ. ಕುಂದಾಪುರ**